*ಎಗಚಿ ಹೊಳೆಯಲ್ಲಿ ಏತ ನೀರಾವರಿ ಯೋಜನೆ

೮೭ ಶ್ರೀ ಕೆ ಹೆಚ್. ಹನುಮೇಗೌಡ (ಹಾನನ).— ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೇ :—

(ಅ) ಹಾನನ ಕ್ಷೇತ್ರದ ಎಗಚಿ ಹೊಳೆಯ ಉಪ್ಪಳ್ಳಿ ಸಮೀಪದಲ್ಲಿ ಏತ ನೀರಾವರಿ ಯೋಜನೆಯನ್ನು ಕಾರ್ಯಗತಗೊಳಿಸಲು ಸರ್ಕಾರದವರು ನಕ್ಷೆ ಮತ್ತು ಅಂದಾಜುಗಳನ್ನು ತಯಾರಿಸಿರುವರೇ :

(ಆ) ಈ ಯೋಜನೆಯ ಅಂದಾಜು ಮೊಬಲಗು ಎಷ್ಟು :

(ಇ) ಈ ಯೋಜನೆಯು ಕಾರ್ಯಗತವಾದರೆ ಎಷ್ಟು ಎಕರೆ ನೀರಾವರಿಗೆ ಬರುತ್ತದೆ :

(ಈ) ಈ ಯೋಜನೆಗೆ ಸರಕಾರ ಯಾವ ತಾರೀಖಿನಲ್ಲಿ ಮಂಜೂರಾತಿ ಕೊಟ್ಟು ಯಾವ ಯಾವ ವರ್ಷಗಳ ಬಡ್ಜೆಟ್ಟಿನಲ್ಲಿ ಯೋಜನೆಯನ್ನು ಸೇರಿಸಲಾಗಿದೆ ಮತ್ತು ಈ ಯೋಜನೆಯು ಬಾಬತ್ತು ಯಾವ ಯಾವ ವರ್ಷ ಎಷ್ಟೆಷ್ಟು ಹಣವನ್ನು ಬಡ್ಜೆಟ್ಟಿನಲ್ಲಿ ಅಳವಡಿಸಲಾಗಿದೆ.

(ಉ) ಈ ಯೋಜನೆಯನ್ನು ಸರಕಾರದವರು ಇದುವರೆವಿಗೂ ಪ್ರಾರಂಭಿಸದಿರಲು ಕಾರಣಗಳೇನು ?

ಶ್ರೀ ಎಸ್. ಬಿ. ನಾಗರಾಳ್ (ಸಣ್ಣ ನೀರಾವರಿ ರಾಜ್ಯಮಂತ್ರಿಗಳು)—

(ಅ) ಹೌದು,

(ಆ) ರೂ. ೨,೧೫೦೦

(ಇ) ೨೨೨ ಎಕರೆಗಳು.

(ಈ) ಸರ್ಕಾರ ಆದೇಶ ಪಿ. ಡಬ್ಲ್ಯೂ. ಡಿ. ೬ ಐ. ಎಫ್. ಎಡ್ಯ. ೭೪ ತಾರೀಖು 4ನೇ ಅಕ್ಟೋಬರ್ 74ರಲ್ಲಿ ಆಡಳಿತ ಮಂಜೂರಾತಿ ದೊರೆತಿದೆ. ಈ ಯೋಜನೆಗೆ ೧೯೭೪-೭೫ರ ಬಡ್ಜೆಟ್ಟಿನಲ್ಲಿ ರೂ. ೨೫,೦೦೦ನ್ನು ೧೯೭೫-೭೬ರ ಆಯವ್ಯಯದ ಮುಂಗಡ ಪತ್ರದಲ್ಲಿ ರೂ. ೧೫,೦೦೦ನ್ನು ಒದಗಿಸಲಾಗಿದೆ.

(ಉ) ತಾಂತ್ರಿಕ ಮಂಜೂರಾತಿ ಆಗಿಲ್ಲದೆ ಇರುವುದರಿಂದ.

ಶ್ರೀ ಕೆ. ಎಚ್. ಹನುಮೇಗೌಡ.—ಸ್ವಾಮಿ ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್ ಆಗಿ ಎರಡು ವರ್ಷವಾಗಿದೆ. ಟೆಕ್ನಿಕಲ್ ಸ್ಯಾಂಕ್ಷನ್ ಆಗುವುದು ವಿಳಂಬವಾಗುವುದಕ್ಕೆ ಕಾರಣ ಏನು?

ಶ್ರೀ ಎಸ್. ಬಿ ನಾಗರಾಳ್.—ಟೆಕ್ನಿಕಲ್ ಸ್ಯಾಂಕ್ಷನ್ ವಿಳಂಬವಾಗಿದೆ ಎಂದು ದೆಸೆಯಿಂದ ಭೀಫ ಇಂಜನಿಯರ ಅವರನ್ನು ಕೇಳಿದೆ. ಸಾಧ್ಯವಾದಷ್ಟು ಬೇಗ ಮಾಡಿಕೊಡುತ್ತೇನೆ.

ಶ್ರೀ ಕೆ. ಎಚ್ ಹನುಮೇಗೌಡ.—ಸ್ವಾಮಿ ಈಗ ಬರಗಾಲಕ್ಕೆ ತುತ್ತಾಗಿರುವ ಆ ಪ್ರದೇಶದಲ್ಲಿರತಕ್ಕ ನೂರಾರು ಸಂಸಾರಗಳಿಗೆ ಅನುಕೂಲವಾಗುತ್ತವೆ. ಪ್ರತಿ ವರ್ಷ ಮುಂಗಾರುಮಳೆ, ಹಿಂಗಾರು ಮಳೆಯಾಗುತ್ತದೆ. ಮಧ್ಯೆ ೨-೩ ತಿಂಗಳು ಮಳೆಯಾಗುವುದಿಲ್ಲ. ಮಳೆ ಹೋದಾಗ ನೀರು ಕೊಟ್ಟರೆ ಅಂತಹ ಕಡೆ ಸುಮಾರು ೨೫೦ ಎಕರೆ ಜಮೀನಿನಲ್ಲಿ ಒಳ್ಳೆ ಬೆಳೆ ಬರುತ್ತದೆ. ಎರಡು ಮೂರು ಹಳ್ಳಿಗಳಲ್ಲಿ ರೈತರು ನೀರಿನ ಕ್ಷಾಮದಿಂದ ಬಿಡುಗಡೆಯಾಗುವುದಕ್ಕೆ ಆದಷ್ಟು ಜಾಗ್ರತೆ ಟೆಕ್ನಿಕಲ್ ಸ್ಯಾಂಕ್ಷನ್ ಪಡೆದು ಕೆಲಸ ಪೂರಾ ಮಾಡುತ್ತೀರಾ ಸ್ವಾಮಿ?

ಶ್ರೀ ಎಸ್. ಬಿ ನಾಗರಾಳ್.—ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್ ಕೊಟ್ಟಿದ್ದಾರೆ. ಟೆಕ್ನಿಕಲ್ ಸ್ಯಾಂಕ್ಷನನ್ನು ಎಗ್ಸಾಮಿನ ಮಾಡಿ ಆದಷ್ಟು ಬೇಗ ಕೆಲಸ ಮಾಡಿಸುವುದಕ್ಕೆ ಎಫರ್ಟಾ ಮಾಡುತ್ತೇವೆ.